All India Radio: Bangalore
National Bulletin In Kannada
07.07.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

- ಬ್ರಿಕ್ಸ್ ಶೃಂಗಸಭೆಯಲ್ಲಿ ಪಹಲ್ಗಾಮ್ ಭಯೋತ್ಪಾದಕ ದಾಳಿ ಕುರಿತು ತೀವ್ರ ಖಂಡನೆ : ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣತಾ ನೀತಿ ಅನುಸರಿಸಲು ಕರೆ
- ಬ್ರಿಕ್ಸ್ ಶೃಂಗಸಭೆಯ ನೇಪಥ್ಯದಲ್ಲಿ ವಿವಿಧ ರಾಷ್ಟ್ರಗಳ ಸಹವರ್ತಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಭೆ
- ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಬಿಹಾರಕ್ಕೆ ಭೇಟಿ : ೧೭ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಯೋಜನೆಗಳಿಗೆ ಚಾಲನೆ
- ಕತಾರ್‌ನಲ್ಲಿ ಇಸ್ರೇಲ್-ಹಮಾಸ್ ನಡುವಿನ ಮೊದಲ ಸುತ್ತಿನ ಪರೋಕ್ಷ ಕದನ ವಿರಾಮ ಮಾತುಕತೆಗಳು ವಿಫಲ
- ಆಂಡ್ರುಸನ್-ತೆಂಡಲ್ಕೂರ್ ಟ್ರೋಫಿ ಟೆಸ್ಟ್ ಸರಣಿ ; ೨ನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ೩೩೬ ರನ್‌ಗಳ ಭರ್ಜರಿ ಜಯ

<><><><>

ಬ್ರೆಜಿಲ್‌ನ ರಿಯೋ ಡಿ ಜನ್ಯೆರೋದಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯ ವೇಳೆ ಮಹತ್ವಪೂರ್ಣ ಹೆಜ್ಜೆಯೊಂದಾಗಿ 'ಲೀಡರ್ಸ್ ಡಿಕ್ಲರೇಶನ್' ಅಥವಾ 'ನಾಯಕರ ಘೋಷಣೆ' ಜಮ್ಮು ಮತ್ತು ಕಾಶ್ಮೀರದಲ್ಲಿ ಏಪ್ರಿಲ್ ೨೨ ರಂದು ನಡೆದ ಭೀಕರ ಭಯೋತ್ಪಾದಕ ದಾಳಿಯನ್ನು ತೀವ್ರವಾಗಿ ಖಂಡಿಸಿದೆ. ಬ್ರಿಕ್ಸ್ ನಾಯಕರು ಅಂತಾರಾಷ್ಟ್ರೀಯ ಗಡಿಗಳ ಬಳಿಯ ಉಗ್ರ ಚಟುವಟಿಕೆಗಳು, ಭಯೋತ್ಪಾದನಾ ಕಾರ್ಯಗಳಿಗೆ ಹಣಕಾಸು ಸಹಾಯ ಹಾಗೂ ಭಯೋತ್ಪಾಕರ ತಾಣಗಳು ಸೇರಿದಂತೆ ಭಯೋತ್ಪಾದನೆಯ ಎಲ್ಲ ರೂಪಗಳು ಮತ್ತು ಪ್ರಕಾರಗಳ ವಿರುದ್ಧ ಹೋರಾಡುವ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿ ಅನುಸರಿಸಬೇಕೆಂದು ಬ್ರಿಕ್ಸ್ ನಾಯಕರು ಒತ್ತಿ ಹೇಳಿದ್ದು, ಉಗ್ರವಾದದ ವಿರುದ್ಧದ ಹೋರಾಟದಲ್ಲಿ ದ್ವಂದ್ವ ನಿಲುವುಗಳನ್ನು ತಳ್ಳಿ ಹಾಕಬೇಕು ಎಂದು ಕರೆ ನೀಡಿದೆ. ಬ್ರಿಕ್ಸ್ ಶೃಂಗಸಭೆ ಕುರಿತಂತೆ ರಿಯೋ ಡಿ ಜನೈರೋದಿಲ್ಲಿರುವ ನಮ್ಮ ಪ್ರತಿನಿಧಿಯಿಂದ ಹೆಚ್ಚಿನ ಮಾಹಿತಿ:

ಧ್ವನಿ : ಸುಧೀಂದ್ರ (೬೦ ಸೆಕೆಂಡ್‌ಗಳು)

<><><><>

ಬ್ರಿಕ್ಸ್ ಶೃಂಗಸಭೆ ನೇಪಥ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಲೇಷಿಯಾ ಸಹವರ್ತಿ ಅನ್ವರ್ ಇಬ್ರಾಹಿಂ ಅವರನ್ನು ಭೇಟಿಯಾದರು. ಈ ವೇಳೆ ಭಾರತ-ಮಲೇಷಿಯಾ ನಡುವಿನ ರಕ್ಷಣೆ, ಭಯೋತ್ಪಾದನಾ ವಿರೋಧಿ ಕ್ರಮ, ಶಿಕ್ಷಣ, ವ್ಯಾಪಾರ, ಹೂಡಿಕೆ ಮತ್ತು ಫಾರ್ಮಾ ಕ್ಷೇತ್ರಗಳಲ್ಲಿ ಸೇರಿದಂತೆ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆ ಪ್ರಗತಿ ಪರಿಶೀಲನೆ ನಡೆಸಿದರು. ಇದೇ ವೇಳೆ ಉಭಯ ನಾಯಕರು ಇಂಡಿಯಾ-ಆಸಿಯಾನ್ ಪಾಲುದಾರಿಕೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಪಹಲ್ಗಾಮ್ ಮೇಲೆ ನಡೆದ ಭಯೋತ್ಪಾದನಾ ದಾಳಿಗೆ ತೀವ್ರ ಖಂಡನೆ ವ್ಯಕ್ತಪಡಿಸಿದ ಪ್ರಧಾನಿ ಅನ್ವರ್ ಇಬ್ರಾಹಿಂ ಅವರಿಗೆ ಧನ್ಯವಾದ ತಿಳಿಸಿದರು. ಕ್ಯೂಬಾದ ಅಧ್ಯಕ್ಷರನ್ನು ಸಹ ಪ್ರಧಾನಿ ನರೇಂದ್ರ ಮೋದಿ ಭೇಟಿಯಾದರು.

<><><><>

ಬ್ರಿಕ್ಸ್ ಶೃಂಗಸಭೆಯ ವೇಳೆ ನಡೆದ 'ಬಹುಪಕ್ಷೀಯತೆ, ಆರ್ಥಿಕ-ಹಣಕಾಸು ವ್ಯವಹಾರಗಳು ಮತ್ತು ಕೃತಕ ಬುದ್ಧಿಮತ್ತೆ ಕುರಿತ ಸಂವಾದಾತ್ಮಕ ಅಧಿವೇಶನದಲ್ಲಿ ಬ್ರಿಕ್ಸ್ ಸದಸ್ಯರು, ಪಾಲುದಾರರು ಮತ್ತು ಆಹ್ವಾನಿತರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದರು.

ಈ ಕುರಿತು ಒಂದು ವರದಿ : ಅಭಯ್ (೩೩ ಸೆಕೆಂಡ್‌ಗಳು)

ತಮ್ಮ ಭಾಷಣದಲ್ಲಿ ಅವರು ಬ್ರಿಕ್ಸ್‌ನ್ನು ಜಾಗತಿಕ ಸಹಕಾರದ ವೇದಿಕೆಯಾಗಿ ಬಣ್ಣಿಸಿದರು. ಹೊಸ ಅಭಿವೃದ್ಧಿ ಬ್ಯಾಂಕ್ - ಎನ್‌ಡಿಬಿ ಹಮ್ಮಿಕೊಂಡಿರುವ ಯೋಜನೆಗಳಲ್ಲಿ ಬೇಡಿಕೆಗೆ ಆಧಾರಿತ ಕಾರ್ಯವಿಧಾನ ಮತ್ತು ದೀರ್ಘಾವಧಿಯ ಆರ್ಥಿಕ ಸುಸ್ಥಿರತೆಯ ಅಗತ್ಯವಿದೆ ಎಂದು ಹೇಳಿದರು. ಭಾರತದ ಕೃಷಿ-ಜೈವ ತಂತ್ರಜ್ಞಾನ, ಡಿಜಿಟಲ್ ಶಿಕ್ಷಣ ವಲಯದ ಕ್ರಮಗಳನ್ನು ವಿವರಿಸಿದ ಪ್ರಧಾನಿ, ಬ್ರಿಕ್ಸ್ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸಲು ಕರೆ ನೀಡಿದರು.

ಕೃತಕ ಬುದ್ಧಿಮತ್ತೆ ಕುರಿತು ಉತ್ತರದಾಯಿ ಆಡಳಿತದ ಬಗ್ಗೆ ಅವರು ಒತ್ತಾಯಿಸಿದ್ದು, ಭಾರತ ೨೦೨೬ರಲ್ಲಿ ಆಯೋಜಿಸಲಿರುವ "ಎಐ ಇಂಪ್ಯಾಕ್ಟ್ ಸಮ್ಮಿಟ್" ಗೆ ಬ್ರಿಕ್ಸ್ ಪಾಲುದಾರರನ್ನು ಆಹ್ವಾನಿಸಿದರು.

<><><>

ಬ್ರೆಜಿಲ್‌ನ ರಿಯೋಡಿ ಜನ್ಯೆರೋದಲ್ಲಿ ನಡೆಯುತ್ತಿರುವ ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಶಾಂತಿ ಮತ್ತು ಭದ್ರತೆ ಕುರಿತು ನಡೆದ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಈ ವೇಳೆ ಅವರು, ಭಯೋತ್ಪಾದಕರ ಮೇಲೆ ನಿರ್ಬಂಧ ವಿಧಿಸಲು ಯಾವುದೇ ಹಿಂಜರಿಕೆ ಇರಬಾರದು. ಭಯೋತ್ಪಾದನೆ ಮನುಕುಲದ ಮುಂದಿರುವ ಅತ್ಯಂತ ಗಂಭೀರ ಸವಾಲಾಗಿದೆ ಎಂದು ತಿಳಿಸಿದ್ದಾರೆ. ಏಪ್ರಿಲ್ ೨೨ ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್‌ಗಾಂನಲ್ಲಿ ನಡೆದ ಉಗ್ರ ದಾಳಿ ಭಾರತದ ಆತ್ಮ ಮತ್ತು ಗೌರವದ ಮೇಲಿನ ನೇರ ದಾಳಿ ಎಂದ ಪ್ರಧಾನಿ, ಭಯೋತ್ಪಾನೆಗೆ ನೇರ ಅಥವಾ ಪರೋಕ್ಷವಾಗಿ ಬೆಂಬಲ ನೀಡುವ ಯಾವುದೇ ದೇಶ ಅದಕ್ಕಾಗಿ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

<><><>

ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ರಷ್ಯಾದ ಸಹವರ್ತಿ ಸೆರ್ಗೆಯ್ ಲಾವ್ರೊವ್ ಅವರನ್ನು ಭೇಟಿಯಾದರು. ಈ ಕುರಿತು ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ದ್ವಿಪಕ್ಷೀಯ ಸಹಕಾರ, ಪಶ್ಚಿಮ ಏಷ್ಯಾ, ಬ್ರಿಕ್ಸ್ ಮತ್ತು ಎಸ್‌ಸಿಒ ಬಗ್ಗೆ ಚರ್ಚಿಸಿರುವುದಾಗಿ ಹೇಳಿದ್ದಾರೆ. ಅವರು ಇರಾನಿನ ಸಹವರ್ತಿ ಸಯ್ಯದ್ ಅಬ್ಬಾಸ್ ಅರಗ್ಚಿ ಅವರನ್ನು ಭೇಟಿಯಾಗಿ, ಇತ್ತೀಚಿನ ಪ್ರಾದೇಶಿಕ ಬೆಳವಣಿಗೆಗಳ ಮೇಲೆ ಮಾತುಕತೆಗಳು ಕೇಂದ್ರೀಕರಿಸಿದೆ ಎಂದು ತಮ್ಮ ಸಾಮಾಜಿಕ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಹಾಗೂ ವಿದೇಶಾಂಗ ಸಚಿವರು ಮೆಕ್ಸಿಕೊದ ವಿದೇಶಾಂಗ ಕಾರ್ಯದರ್ಶಿ ಜುವಾನ್ ರಾಮನ್ ಡೆ ಲಾ ಫ್ಯೂಯೆಂಟೆ ಅವರನ್ನು ಭೇಟಿಯಾಗಿ ಆರೋಗ್ಯ, ಡಿಜಿಟಲ್, ತಂತ್ರಜ್ಞಾನ ಮತ್ತು ಬಾಹ್ಯಾಕಾಶದ ಮೇಲೆ ಕೇಂದ್ರೀಕರಿಸುವ ಭಾರತ-ಮೆಕ್ಸಿಕೋ ಪಾಲುದಾರಿಕೆಯ ಮತ್ತಷ್ಟು ಪ್ರಗತಿಯ ಬಗ್ಗೆ ಚರ್ಚಿಸಿದರು.

<><><>

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಬಿಹಾರಕ್ಕೆ ಭೇಟಿ ನೀಡಲಿದ್ದಾರೆ. ಸಮಷ್ಟಿಪುರ ಜಿಲ್ಲೆಯ ಕರ್ಪೂರಿ ಗ್ರಾಮ ರೈಲು ನಿಲ್ದಾಣದಲ್ಲಿ ೧೭ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ನಿರ್ಮಾಣ ಯೋಜನೆಗಳನ್ನು ಅವರು ಉದ್ಘಾಟಿಸಲಿದ್ದಾರೆ. ೩.೩ ಕೋಟಿ ರೂಪಾಯಿ ವೆಚ್ಚದ ಕರ್ಪೂರಿ ಗ್ರಾಮ ನಿಲ್ದಾಣದ ಮೇಲ್ದರ್ಜೆ ನಿರ್ಮಾಣಕ್ಕೆ ರೈಲ್ವೆ ಸಚಿವರು ಅಡಿಪಾಯ ಹಾಕಲಿದ್ದಾರೆ ಹಾಗೂ ನಿಲ್ದಾಣದ ಬಳಿಯ ಲೆವೆಲ್ ಕ್ರಾಸಿಂಗ್‌ನಲ್ಲಿ ೧೪ ಕೋಟಿ ರೂಪಾಯಿ ವೆಚ್ಚದ ಅಂಡರ್‌ಪಾಸ್‌ಗೂ ಅವರು ಶಂಕುಸ್ಥಾಪನೆ ಹಾಕಲಿದ್ದಾರೆ.  ಈ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ರಾಜ್ಯ ಸಚಿವ ರಾಮನಾಥ್ ಠಾಕೂರ್, ಇತರ ಗಣ್ಯರು ಮತ್ತು ಪೂರ್ವ ಮಧ್ಯ ರೈಲ್ವೆಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

<><><><>

ಕತಾರ್‌ನಲ್ಲಿ ನಡೆದ ಇಸ್ರೇಲ್ ಮತ್ತು ಹಮಾಸ್ ನಡುವಿನ ಮೊದಲ ಸುತ್ತಿನ ಪರೋಕ್ಷ ಕದನ ವಿರಾಮ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೇ ಕೊನೆಗೊಂಡಿದೆ ಎಂದು ಪ್ಯಾಲೆಸ್ತೀನ್ ಮೂಲಗಳು ತಿಳಿಸಿವೆ. ದೋಹಾದಲ್ಲಿ ನಿನ್ನೆ ನಡೆದ ಚರ್ಚೆಗಳು ಕದನ ವಿರಾಮ ಮತ್ತು ಒತ್ತೆಯಾಳು ಬಿಡುಗಡೆ ಒಪ್ಪಂದಕ್ಕೆ ಮಾರ್ಗಗಳನ್ನು ಅನ್ವೇಷಿಸುವ ಗುರಿ ಹೊಂದಿದ್ದವು. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನಃ ಅಧಿಕಾರಕ್ಕೆ ಬಂದ ನಂತರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಮೆರಿಕಕ್ಕೆ ಕೈಗೊಳ್ಳುತ್ತಿರುವ ೩ನೇ ಪ್ರವಾಸಕ್ಕೂ ಮುನ್ನ ಈ ಚರ್ಚೆಗಳು ನಡೆದಿವೆ. ಪ್ರವಾಸಕ್ಕೆ ತೆರಳುವ ಮುನ್ನ ಇಸ್ರೇಲ್ ಪ್ರಧಾನಿ, ಇಸ್ರೇಲ್ ಒಪ್ಪಿಕೊಂಡಿರುವ ಷರತುಗಳ ಅಡಿಯಲ್ಲಿ ಕದನ ವಿರಾಮ ಸಾಧಿಸುವಂತೆ ತಮ್ಮ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದರು

<><><><>

ಅಮೆರಿಕದ ಟೆಕ್ಸಸ್‌ನಲ್ಲಿ ಸಂಭವಿಸಿರುವ ಭೀಕರ ಪ್ರವಾಹದಲ್ಲಿ ಸಾವನಪ್ಪಿದವರ ಸಂಖ್ಯೆ ೮೦ಕ್ಕೇರಿದೆ. ಇದರಲ್ಲಿ ೨೮ ಮಕ್ಕಳು ಸೇರಿದ್ದಾರೆ.  ಗೌಡಾಲುಪೆ ನದಿಯ ಬಳಿ ಇದ್ದ ಬೇಸಿಗೆ ಶಿಬಿರಕ್ಕೆ ಭಾರೀ ಮಳೆಯಿಂದ ನದಿ ನೀರು ನುಗ್ಗಿದ ಪರಿಣಾಮ ೧೧ ಬಾಲಕಿಯರು ಸೇರಿದಂತೆ ಹಲವರು ನಾಪತ್ತೆಯಾಗಿದ್ದು, ಶೋಧ ಕಾರ್ಯಾಚರಣೆ ಮುಂದುವರೆದಿದೆ.

<><><><>

ಬರ್ಮಿಂಗ್ ಹ್ಯಾಮ್‌ನ ಎಡ್ಜ್ ಬ್ಯಾಸ್ಟನ್‌ನಲ್ಲಿ ನಡೆದ ಆಂಡ್ರಸನ್-ತೆಂಡಲ್ಕೂರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ೨ನೇ ಪಂದ್ಯದಲ್ಲಿ ಭಾರತ ಆತಿಥೇಯ ಇಂಗ್ಲೆಂಡ್ ತಂಡವನ್ನು ೩೩೬ ರನ್‌ಗಳಿಂದ ಮಣಿಸಿದೆ.

ಆ ಮೂಲಕ ಸರಣಿಯಲ್ಲಿ ೧-೧ ಅಂತರದ ಸಮಬಲ ಸಾಧಿಸಿದೆ. ಈ ಗೆಲುವು ಭಾರತಕ್ಕೆ ಈ ಕ್ರೀಡಾಂಗಣದಲ್ಲಿ ಮೊದಲ ಗೆಲುವಾಗಿದ್ದು, ಇದು ೫೮ ವರ್ಷಗಳ ಈ ಮೈದಾನದಲ್ಲಿನ ಗೆಲುವಿನ ಬರ ನೀಗಿಸಿದೆ. ಐದನೇ ದಿನದಾಟ ಮಳೆಯಿಂದಾಗಿ ೧೦೦ ನಿಮಿಷಗಳ ವಿಳಂಬದೊಂದಿಗೆ ಆರಂಭವಾದರೂ ಭಾರತೀಯ ಬೌಲರ್‌ಗಳು ಇಂಗ್ಲೆಂಡ್‌ನ ಉಳಿದ ೭ ವಿಕೆಟ್‌ಗಳನ್ನು ಪಡೆಯುವಲ್ಲಿ ಸಫಲರಾದರು. ಆಕಾಶ್‌ದೀಪ್ ೧೦ ವಿಕೆಟ್ ಗೊಂಚಲು ಪಡೆದು ೧೯೮೬ರಲ್ಲಿ ಚೇನತ್ ಶರ್ಮ ಬಳಿಕ ಈ ಸಾಧನೆ ಮಾಡಿದ ೨ನೇ ಭಾರತೀಯ ಬೌಲರ್ ಎನಿಸಿಕೊಂಡರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>